International Research Journal of Human Resources & Social Sciences
Volume -1 Issue-1 (June 2014) ISSN (P): 2394-4085

# ORGANIZATIONS OF BANGALORE AND FREEDOM MOMENT.

- **Dr.H.Krishnegowda**

## ಬೆಂಗಳೂರಿನ ಸಂಘ ಸಂಸ್ಥೆಗಳು ಮತ್ತು ಸ್ವಾತಂತ್ರ್ಯ ಚಳುವಳಿ

– *ಡಾ.ಎಚ್.ಕೃಷ್ಣೇಗೌಡ*
**ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ,**
**ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮದ್ದೂರು.**

ನಾಗರೀಕ ಮಾನವ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ತತ್ವದಡಿಯಲ್ಲಿ ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ಹಕ್ಕುಗಳ ರಕ್ಷಣೆಗಾಗಿ, ಧಾರ್ಮಿಕ ಉದ್ದೇಶಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಸಂಘಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಾ ಬಂದ. ಬೆಂಗಳೂರಿನ 1898ರ ವಿವೇಕಾನಂದರ ಭೇಟಿ, 1915ರ ಗಾಂಧೀಜಿ ಭೇಟಿ, 1911ರಲ್ಲಿ ಮದ್ರಾಸಿನಿಂದ ಬೆಂಗಳೂರಿಗೆ ಆಗಮಿಸಿದ್ದ ಶಾರದಾ ದೇವಿಯವರ ಭೇಟಿ, ರವೀಂದ್ರನಾಥ ಠಾಕೂರರ ಭೇಟಿ, ಉಮಾಬಾಯಿ ಕುಂದಾಪುರ, ಕಮಲಾದೇವಿ ಚಟ್ಟೋಪಾಧ್ಯಾಯ ಈ ಎಲ್ಲಾ ಮಹನೀಯರ ಭೇಟಿ, ಪ್ರಭಾವದಿಂದ ಅನೇಕ ಸಂಘಗಳು ಬೆಂಗಳೂರಿನಲ್ಲಿ ಸ್ಥಾಪನೆಗೊಂಡವು. ಬೆಂಗಳೂರಿನಲ್ಲಿ ಸಕ್ರಿಯವಾಗಿದ್ದ ಅನೇಕ ಸಂಘಟನೆಗಳ ಬಗೆಗೆ ಮಾತನಾಡುವಾಗ ಅವುಗಳ ಮಹತ್ವ ಅರಿವಿಗೆ ಬಾರದಿದ್ದರು ಅವು ಜನಮುಖಿ ನಿಲುವುಗಳನ್ನು ಪ್ರತಿನಿಧಿಸಿ ಸಾಮಾಜಿಕವಾಗಿ ಧಾರ್ಮಿಕವಾಗಿ, ಜಡ್ಡುಗಟ್ಟಿದ್ದ ಅಜ್ಞಾತವಾಗಿ ಉಳಿದಿದ ಜನ ಸಮುದಾಯಗಳನ್ನು ಎಚ್ಚರಿಸುವ ಕೆಲಸ ಮಾಡಿದವು. ತಮ್ಮ ಸೇವಾ ಕೈಂಕರ್ಯಗಳ ಮೂಲಕ ಬಡವರಿಗೆ, ಅನಾಥರಿಗೆ, ದೀನದಲಿತರಿಗೆ ರಕ್ಷಣೆ ನೀಡಿ ಆತ್ಮಸ್ಥೈರ್ಯ ತುಂಬಿ ಆರ್ಥಿಕ ಬುನಾದಿ ಹಾಕಿ ಕೊಟ್ಟವು. ಅವು ಜಾರಿಗೆ ತಂದ ಸಮಾಜ ಸುಧಾರಣೆಗಳು ರಾಷ್ಟ್ರೀಯ ಭಾವನೆಯ ಪ್ರತೀಕವಾಗಿದ್ದು, ಪರೋಕ್ಷವಾಗಿ ಸ್ವಾತಂತ್ರ್ಯ ಚಳವಳಿಯತ್ತ ಜನತೆ ಅಭಿಮುಖವಾಗಲು ಪ್ರೇರಣೆ ನೀಡಿದವು. ಅದರಲ್ಲೂ ಹರಿಜನೋದ್ಧಾರ ಕಾರ್ಯಕ್ರಮಗಳಿಗೆ ಎಲ್ಲ ವರ್ಗಗಳ ಜನ ಸ್ಪಂದಿಸಿದ ರೀತಿ ಆ ಕಾಲ ಘಟ್ಟದ ಮಹತ್ವದ ಬೆಳವಣಿಗೆ, ಮಹಿಳೆಯರು ಸಹ ಜಾಗೃತರಾಗಿ ತಮ್ಮ ಮೇಲಿನ ದೌರ್ಜನ್ಯದ ಹೇರಿಕೆಗಳನ್ನು ಸಾತ್ವಿಕವಾಗಿ ವಿರೋಧಿಸಿದರು. ವಿಧವಾ ವಿವಾಹ ಮತ್ತು ಸ್ತ್ರೀ ಸ್ವಾತಂತ್ರ್ಯ ವಿಚಾರ ಮಹತ್ವ ಪಡೆಯಲು, ಸ್ವಾತಂತ್ರ್ಯ ಚಳವಳಿ ಪ್ರೇರಣೆಯಾಯಿತು. ಜಾತಿ ಸಂಘಟನೆಗಳು ಹುಟ್ಟಿಕೊಂಡು ಅವು ಸಹ ತಮ್ಮ ತಮ್ಮ ವರ್ಗದ ಉದ್ದಾರಕ್ಕಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ರಾಜಕೀಯ ಪ್ರಜ್ಞೆ ಮೂಡಿಸಿ ಲಭ್ಯ ಅವಕಾಶಗಳ ಬಗೆಗೆ ಅರಿವು ಮೂಡಿಸಿದವು. ರಾಜಕೀಯ ಅವಕಾಶಗಳನ್ನು ಪಡೆದುಕೊಳ್ಳಲು ಒತ್ತಡ ಹೇರಲಾಯಿತು. ಅಲ್ಲದೆ ಅವಕಾಶಗಳನ್ನು ಪಡೆದುಕೊಳ್ಳಲು

ಅನೇಕ ವೇದಿಕೆಗಳು ಹುಟ್ಟಿಕೊಂಡು ಸ್ವಾತಂತ್ರ್ಯ ಚಳವಳಿಯ ಹೋರಾಟದೊಂದಿಗೆ ಕೈಜೋಡಿಸಿದವು ಎನ್ನಬಹುದು.

ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಪೂರ್ವದ ಬೆಂಗಳೂರು ನಗರದಲ್ಲಿ ಸುಮಾರು 100ಕ್ಕೂ ಹೆಚಿನ ಸಂಘಸಂಸ್ಥೆಗಳನ್ನು ಗುರ್ತಿಸಿ ಅವುಗಳನ್ನು ಸಾಮಾಜಿಕ, ಧಾರ್ಮಿಕ, ಸಾಮುದಾಯಿಕ, ಯುವಕ ಸಂಘಗಳು, ಕಾರ್ಮಿಕ ಹಾಗೂ ಶೈಕ್ಷಣಿಕ ಸಂಘಗಳು, ರಾಜಕೀಯ ಸಂಘಗಳು, ಸಾಂಸ್ಕೃತಿಕ ಸಂಘಗಳು ಮುಂತಾಗಿ ವಿಂಗಡಿಸಬಹುದಾಗಿದೆ.

ಸಾಮಾಜಿಕ ಸಂಘಗಳಲ್ಲಿ 1934ರಲ್ಲಿ ಸ್ಥಾಪನೆಗೊಂಡ 'ಹರಿಜನ ಸೇವಕ ಸಂಘ' ಬಹಳ ಪ್ರಮುಖವಾದದ್ದು. ಮಾಜಿ ದಿವಾನ್ ಮಾಧವರಾಯರು ಇದರ ಪ್ರಥಮಾಧ್ಯಕ್ಷರಾಗಿದ್ದು. ಕೆ.ಟಿ.ಭಾಷ್ಯಂ, ಮುನ್ನಾಜಿರಾಯರು, ತಗಡೂರು ರಾಮಚಂದ್ರರಾಯರು, ವಿ.ವೆಂಕಟಪ್ಪ ಇವರೆಲ್ಲ ಪ್ರಮುಖ ಕಾರ್ಯಕರ್ತರಾಗಿದ್ದರು. ಹರಿಜನರಿಗೆ ಶಿಕ್ಷಣ, ದೇವಾಲಯ ಪ್ರವೇಶ, ಸಾರ್ವಜನಿಕ ಕೆರೆ, ಬಾವಿ ಬಳಸಲು ಅವಕಾಶ ಕಲ್ಪಿಸುವುದರ ಮೂಲಕ ಅವರಲ್ಲಿ ಜಾಗೃತಿ ಮೂಡಿಸಿತು. ದಿನಾಂಕ: 22ನೇ ನವೆಂಬರ್ 1944 ರಂದು ಬೆಂಗಳೂರಿಗೆ ಆಗಮಿಸಿದ್ದ ಡಾ॥ ಅಂಬೇಡ್ಕರ್, ಡಿಪ್ರೆಸ್ಡ್‌ಕ್ಲಾಸಸ್ ಫೆಡರೇಷನ್ ವತಿಯಿಂದ ಏರ್ಪಡಿಸಿದ್ದ ಸಭೆಯಲ್ಲಿ ಮಾತನ್ನಾಡಿದರು. ಶ್ರೀ ರಾಮಪುರ ಲೇಬರ್ ಕಾಲೋನಿಯಲ್ಲಿದ್ದ 'ಸಮಾಜ ಸೇವಾ' ಸಂಘವು ಡಬ್ಲ್ಯೂ ಹೆಚ್.ಹನುಮಂತಪ್ಪ, ಕೃಷ್ಣಸ್ವಾಮಿಪಿಳ್ಳೈ ನೇತೃತ್ವದಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿತ್ತು. 1933ರಲ್ಲಿ ಎಂ.ಎ.ಪರಶುರಾಮ್‌ರವರಿಂದ ಅರಳೇಪೇಟೆಯಲ್ಲಿ ಸ್ಥಾಪನೆಯಾದ ದರಿದ್ರನಾರಾಯಣ ಸಂಘವು ಪ್ರಮುಖವಾಗಿದ್ದು, , ದೇಶದ ಸ್ವಾತಂತ್ರ್ಯ, ಪ್ರಜೆಗಳ ಹಾಗೂ ಕಾರ್ಮಿಕ ವರ್ಗದ ಕಲ್ಯಾಣ, ಶಿಕ್ಷಣ ಪ್ರಚಾರದಂತಹ ಉದ್ದೇಶಗಳನ್ನು ಹೊಂದಿ ಸ್ವಾತಂತ್ರ್ಯ ಚಳವಳಿಯಲ್ಲಿ ನೇರವಾಗಿ ಭಾಗವಹಿಸಿತ್ತು. ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ಪ್ರಾಣಿಬಲಿ ವಿರುದ್ಧ ಮತ್ತು ಖಾದಿ ಪ್ರಚಾರ ಕಾರ್ಯಗಳಿಗಾಗಿ ಶ್ರಮಿಸುತ್ತಿತ್ತು. ಸಂಘದ ಸದಸ್ಯರೆಲ್ಲ ಖಾದಿಧರಿಸಿ ಕಾಂಗ್ರೆಸ್ ಸದಸ್ಯರಾಗಿ ಸೇವಾ ಕಾರ್ಯದಲ್ಲಿ ತೊಡಗಬೇಕಾಗಿತ್ತು.

1937ರ ಮೇ ತಿಂಗಳಲ್ಲಿ ಸ್ಥಾಪನೆಗೊಂಡ ಜನಜಾಗೃತಿ ಸಂಘದ ಅಧ್ಯಕ್ಷರಾಗಿ ಬಿ.ಎಂ.ಸೀನಪ, ಕಾರ್ಯದರ್ಶಿಯಾಗಿ ಶ್ರೀನಿವಾಸಮೂರ್ತಿ, ಖಜಾಂಚಿಯಾಗಿ ಎನ್.ಪಿ.ಶಂಕರ್ ನೇಮಕಗೊಂಡರು. ರಾಷ್ಟ್ರಮಟ್ಟದಲ್ಲಿ ಸಂಘದ ಶಾಖೆಯಾಗಿದ್ದು, ಸಾಮಾಜಿಕ ಬದಲಾವಣೆ ಬಯಸಿ, ಸಾರ್ವಜನಿಕ ಹಿತಕ್ಕಾಗಿ ದುಡಿಯುವ ಸೇವಾಭಾವನೆ ಹೊಂದಿದ್ದ ಅವಿವಾಹಿತರಿಗೆ ಸದಸ್ಯತ್ವ ನೀಡಲಾಗುತ್ತಿತ್ತು. ಸಾರ್ವಜನಿಕರು ನಿರ್ಭೀತಿಯಿಂದ ಬದುಕುವ ಅವಕಾಶ, ಸರ್ಕಾರದ ದಮನಕಾರಿ ನೀತಿಯ ಖಂಡನೆ, ಖೈದಿಗಳ

ಹಿತರಕ್ಷಣೆ, ಜೈಲುಸುಧಾರಣೆ, ನಿರುದ್ಯೋಗ ನಿವಾರಣೆ, ಸಾಮಾಜಿಕ ಸಮಸ್ಯೆಗಳ ನಿವಾರಣೆ, ಚಳವಳಿ ಸಂಬಂಧ ಮರಣ ಹೊಂದಿದ ಕುಟುಂಬದವರಿಗೆ ಪರಿಹಾರ, ಸತ್ಯಾಗ್ರಹಿಗಳಿಗೆ ಬೆಂಬಲ, ಕರಪತ್ರಗಳ ಮೂಲಕ ಸಾರ್ವಜನಿಕರಿಂದ ಪ್ರತಿಭಟನೆ ಏರ್ಪಡಿಸುವಂತಹ ಈ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿತ್ತು. ಉದಾಹರಣೆಗೆ "45 ಮೈಸೂರು ಪೊಲೀಸ್ ರೆಗ್ಯುಲೇಷನ್ ಆಕ್ಟ್" ಸರ್ಕಾರದಿಂದ ಜಾರಿಯಾದಾಗ ಅದರ ವಿರುದ್ಧ ಉಗ್ರ ಪ್ರತಿಭಟನೆ ಮಾಡಿತು. ಸಮಾಜವಾದಿ ಹಾಗೂ ಕಾಂಗ್ರೆಸ್ ನಾಯಕ ಮಸಾನಿ ಸಭೆಗೆ ಸಂಘದ ಕಛೇರಿಯಲ್ಲಿ ಅವಕಾಶ ಮಾಡಿತು. ನಾರಿಮನ್ ಸಭೆಗೆ ವ್ಯವಸ್ಥೆ ಮಾಡಿದ್ದನ್ನು ಗಮನಿಸಬಹುದಾಗಿದೆ.

ರಾಷ್ಟ್ರಮಟ್ಟದ ಸಂಘದ ಶಾಖೆಯಾಗಿ, ಬೆಂಗಳೂರಿನಲ್ಲಿ ಸಿವಿಲ್ ಲಿಬರ್ಟಿ ಯೂನಿಯನ್ ಪ್ರಾರಂಭವಾಯಿತು. ಅಧ್ಯಕ್ಷರಾಗಿ ಎಲ್.ಎಸ್.ರಾಜು, ಕಾರ್ಯದರ್ಶಿಯಾಗಿ ಎನ್.ಬಾಲಕೃಷ್ಣ, ಖಜಾಂಚಿಯಾಗಿ ವಾಜಪೇಯಿ ವೆಂಕಟೇಶಯ್ಯನವರು, ಸದಸ್ಯರಾಗಿ ಹೆಚ್.ಬಿ.ಗುಂಡಪ್ಪಗೌಡ, ಹೆಚ್.ಆರ್.ಗುರುವಾರೆಡ್ಡಿ, ಎಸ್.ಡಿ.ವೆಂಕಟರಮಣ, ತಗಡೂರು ರಾಮಚಂದ್ರರಾವ್ ಕಾರ್ಯನಿರ್ವಹಿಸುತ್ತಿದ್ದರು. ಪತ್ರಿಕಾ ಸ್ವಾತಂತ್ರ್ಯಕ್ಕೆ ಅವಕಾಶ ಮಾಡಿಕೊಡುವುದು, ಸ್ತ್ರೀ ಪುರುಷರ ನಡುವೆ ಸಮಾನ್ತೆ, ಖೈದಿಗಳ ಹಿತರಕ್ಷಣೆ, ಜೈಲುಗಳ ಸುಧಾರಣೆ ಹಿನ್ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಚಾಮರಾಜ ಪೇಟೆಯ 50 ವರ್ಷದ ಕಾಳಪ್ಪ ಎಂಬುವವರು 16 ವರ್ಷದ ಹುಡಿಯೊಡನೆ ವಿವಾಹವಾಗುತ್ತಿದ್ದನ್ನು ಖಂಡಿಸಿ ಅವರ ವಿರುದ್ಧ ಉಗ್ರ ಪ್ರತಿಭಟನೆ ಮಾಡಿ ತಡೆಯಿತು. ಎನ್.ಎನ್.ಚಂದುರ್‌ರವರಿಂದ ಸ್ಥಾಪನೆಯಾದ ರಾಷ್ಟ್ರಸೇವಾ ಸಂಘ ಮಲ್ಲೇಶ್ವರಂನಲ್ಲಿನ ದೀನಸೇವಾ ಸಂಘ, ಹಾಗೂ "ಸಿವಿಕ್ ಅಂಡ್ ಸೋಷಿಯಲ್ ಪ್ರೋಗ್ರೆಸ್ ಅಸೋಸಿಯೇಷನ್" ಇವುಗಳ ಚಟುವಟಿಕೆಗಳು ಶ್ಲಾಘನೀಯವಾದವು. ಸಿವಿಕ್ ಅಸೋಸಿಯೇಷನ್‌ಗೆ 1937ರಲ್ಲಿ ಗಾಂಧೀಜಿ ಭೇಟಿ ನೀಡಿ ಯುವಕರು ರಾಜಕೀಯ ಪ್ರವೇಶಿಸಬೇಕು ಎಂದು ಹೇಳಿದರು.

ಧಾರ್ಮಿಕ ಸಂಘಟನೆಗಳಲ್ಲಿ ವೀರೇಶಲಿಂಗಂ ಪಂತಲು ಪ್ರಭಾವದಿಂದ ಸ್ಥಾಪನೆಯಾದ ಬ್ರಹ್ಮಸಮಾಜ, ವಿಶ್ವೇಶ್ವರಾನಂದ ಸರಸ್ವತಿಯವರಿಂದ ಆರ್ಯಸಮಾಜ, ಅನಿಬೆಸೆಂಟ್, ಅರುಂಡಲೆ ವಾಡಿಯರಿಂದ ಥಿಯೋಸಾಫಿಕಲ್ ಸೊಸೈಟಿ ಪ್ರಾರಂಭವಾದವು. ಇವು ಸಾಮಾಜಿಕ ಸಮಸ್ಯೆಗಳ ನಿವಾರಣೆ, ವಿಧವಾ ವಿವಾಹಕ್ಕೆ ಪ್ರೋತ್ಸಾಹ ಮತ್ತಿತರ ಧ್ಯೇಯಗಳನ್ನು ಹೊಂದಿ, ಜನರಲ್ಲಿ ಧಾರ್ಮಿಕವಾಗಿ, ಸಾಮಾಜಿಕವಾಗಿ ಜಾಗೃತಿ ಮೂಡಿಸಿದವು. ಬ್ರಹ್ಮ ಸಮಾಜದ ಧುರೀಣರಾದ ಆರ್ಕಾಟ್ ನಾರಾಯಣಸ್ವಾಮಿ ದೊದಲಿಯರ್ ಒಂದು ಸ್ಕೂಲನ್ನು ಸ್ಥಾಪಿಸಿ ಅದರ ಮುಖ್ಯೋಪಾಧ್ಯಾಯರನ್ನಾಗಿ

ಬಿಪಿನ್ ಚಂದ್ರಪಾಲ್‌ರವರನ್ನು ನೇಮಿಸಿದ್ದರು. ಒಂದು ವರ್ಷ ಸೇವೆ ಸಲ್ಲಿಸಿದ ಬಿಪಿನ್ ಚಂದ್ರಪಾಲ್ ಪ್ರಭಾವ ಬೆಂಗಳೂರಿನ ಜನತೆ ಮೇಲಾಯಿತು. ಆರ್ಯ ಸಮಾಜದ ಮುಖ್ಯಸ್ಥರಾಗಿ ಸುಬ್ಬನ್ರಸಿಂಹಶಾಸ್ತ್ರಿ, ಶ್ರೀ ರಾಮಚಂದ್ರರಾವ್ ಶಿಂಥೆ ಕಾರ್ಯ ನಿರ್ವಹಿಸಿದರು. 1898ರಲ್ಲಿ ಸ್ವಾಮಿ ವಿವೇಕಾನಂದರು, ಬೆಂಗಳೂರಿಗೆ ಭೇಟಿ ನೀಡಿ ಕಂಟೋನ್ಮೆಂಟ್‌ನ ಡಾ॥ ಪಲ್ಪು ಮನೆಯಲ್ಲಿ ಎರಡು ದಿವಸ ತಂಗಿದ್ದು, ತಮ್ಮ ಭಾಷಣ, ಚಿಂತನೆ, ತೇಜಸ್ಸಿನ ಮುಖಾಂತರ ಬೆಂಗಳೂರಿನ ಜನತೆ ಮೇಲೆ ಅಪಾರ ಪ್ರಭಾವ ಬೀರಿದರು. ಇವರ ಪ್ರಭಾವದಿಮ್ದಲೇ 1904ರಲ್ಲಿ ಬೆಂಗಳೂರಿನಲ್ಲಿ ರಾಮಕೃಷ್ಣ ಮಿಷನ್ ಸ್ಥಾಪನೆಯಾಯಿತು. ಕ್ರಿ.ಶ.1335ರಲ್ಲಿಯೇ ಬೆಂಗಳೂರಿಗೆ ಕ್ರೈಸ್ತ ಮಿಷನರಿಗಳ ಪ್ರವೇಶವಾಯಿತೆನ್ನಲಾಗಿದೆ. ಆನೆಕಲ್ಲಿನಲ್ಲಿರುವ ಸಮಾಧಿಶಿಲೆ ಸಾಕ್ಷಿಯಾಗಿದೆ. ನಂತರ ಬೆಂಗಳೂರಿನಲ್ಲಿ 1820ರಲ್ಲಿ ಲಂಡನ್ ಮಿಷನ್, 1830 ರಲ್ಲಿ ವೆಸ್ಲಿಯನ್ ಮೆಥಾಡಿಸ್ಟ್ ಮಿಷನರಿ ಸೊಸೈಟಿ, 1851ರಲ್ಲಿ ಬಾಸೆಲ್ ಮಿಷನ್ 1862ರಲ್ಲಿ ಕ್ರಿಶ್ಚಿಯನ್ ವರ್ನಾಕ್ಯೂಲರ ಸೊಸೈಟಿ, ಮುಂತಾದವು ಧರ್ಮ ಪ್ರಚಾರದ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡು, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಪತ್ರಿಕೆಗಳ ಪ್ರಾರಂಭ ಮುದ್ರಣ ಯಂತ್ರಗಳ ಬಳಕೆಯಿಂದ ಜನರ ಮೌಢ್ಯತೆ ತೊಲಗಿಸಿ ಆಧುನಿಕ ಚಿಂತನೆಗಳು ಮೊಳಕೆಯೊಡಯುವಂತೆ ಮಾಡಿದವು. 1928ರ ಗಣೇಶನ ಗಲಾಟೆ ಬೆಂಗಳೂರಿನಲ್ಲಿ ಜರುಗಿದ ನಂತರ, ಸಂಪಿಗೆ ವೆಂಕಟಪತಯ್ಯನವರ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾದ ಹಿಂದೂ ಮಹಾಸಭೆ ಸಕ್ರಿಯ ಸಂಘಟನೆಯಲ್ಲಿ ತೊಡಗಿತು. ಇದರ ಕಾರ್ಯಕ್ರಮಗಳು ಸೆಂಟ್ರಲ್ ಕಾಲೇಜಿನ ಹಾಸ್ಟಲ್‌ನಲ್ಲಿ ಜರುಗುತ್ತಿದ್ದವು. ಹಿಂದೂಗಳ ಒಗ್ಗಟ್ಟಿನಲ್ಲಿ ದೇಶ ಸ್ವಾತಂತ್ರ್ಯ ಹೊಂದಲು ಹಾಗೂ ಅದರ ಅಖಂಡತೆ ಉಳಿಯಲು ಸಾಧ್ಯ ಎಂದು ಹೇಳಿತು. ಇದಕ್ಕೆ ಪ್ರತಿಸ್ಪರ್ಧಿಯಾಗಿ ಮುಸ್ಲಿಂ ಲೀಗ್ ಸ್ಥಾಪನೆಯಾಗಿ ಜಿನ್ನಾನ ನಾಯಕತ್ವದಲ್ಲಿ ಬೆಂಬಲ ವ್ಯಕ್ತಪಡಿಸಿತು.

ಸಾಮುದಾಯಿಕ ಸಂಘಗಳು ಸ್ಥಾಪನೆಯಾಗಿ ತಮ್ಮ ಜನರ ಹಿತರಕ್ಷಣೆ, ಶಿಕ್ಷಣ ಮತ್ತು ಏಳಿಗೆಗೆ ಶ್ರಮಿಸತೊಡಗಿದವು. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿದವುಗಳೆಂದರೆ 1906ರ ಏಪ್ರಿಲ್‌ನಲ್ಲಿ ಸ್ಥಾಪನೆಗೊಂಡ ಒಕ್ಕಲಿಗರ ಸಂಘ, 1904ರ ಲಿಂಗಾಯಿತ ಸಂಘ, 1909 ರ ಮಹಮಡನ್ ಅಸೋಸಿಯೇಷನ್, ಕುರುಬರ ಸಂಘ, ದೇವಾಂಗ ಸಂಘ, ಲಂಬಾಣಿ ಜನರ ಮಹಾಸಭೆ, ಮರಾಠ ಮಹಾಸಭೆ, ವಹ್ನಿಕುಲ ಕ್ಷತ್ರಿಯರ ಸಭೆ, ಆಂಧ್ರ ದೇವಾಂಗ ಸಮಾಜ, ಹೊಯ್ಸಳ ಕರ್ನಾಟಕ ಬ್ರಾಹ್ಮಣರ ಸಂಘ, ಡಿಪ್ರೆಸ್ಡ್ ಕ್ಲಾಸಸ್ ಮಿಷನ್, ಕಣಿಯರ ಸಂಘ ಮುಂತಾದವು ತಮ್ಮ ತಮ್ಮ ಸಮುದಾಯದ ಹಿತಾಸಕ್ತಿ ಹಾಗೂ ತಮ್ಮದೇ ಪ್ರಾತಿನಿಧ್ಯ ಪಡೆದುಕೊಳ್ಳಲು ಸ್ಥಾಪನೆಗೊಂಡ ಈ ಸಂಘಗಳು, ಶಿಕ್ಷಣದ ಮುಖಾಂತರ ಸಮುದಾಯಗಳಲ್ಲಿ ಅರಿವು ಮೂಡಿಸಿ ವಸಾಹತುಶಾಹಿ ವಿರುದ್ಧ ಜನರು ತಿರುಗಿ ಬೀಳಲು ಕಾರಣವಾದವು.

ಮಹಿಳಾ ಸಂಘಟನೆಗಳು ಬೆಂಗಳೂರಿನಲ್ಲಿ 1910ರವರೆಗೆ ಇರಲಿಲ್ಲ. 1910ರಿಂದ 1930ರವರೆಗೆ ಅನೇಕ ಸಂಘಗಳು ಪ್ರಾರಂಭವಾದವು. ಮುಖ್ಯವಾಗಿ ನಗರದ ಡಿ.ವಿ.ಜಿ ರಸ್ತೆಯಲ್ಲಿ ಅಬಲಾಶ್ರಮ 1911ರಲ್ಲಿ ಬಾಲ ವಿಧವೆ ಕೃಷ್ಣಮ್ಮನವರಿಂದ ಸ್ಥಾಪನೆಯಾಯಿತು. 1913ರಲ್ಲಿ ಪಾರ್ವತಮ್ಮ ಪುಟ್ಟಣ್ಣಚೆಟ್ಟಿಯವರಿಂದ ಶಾರದ ಸ್ತ್ರೀಸಮಾಜ, ಮಲ್ಲೇಶ್ವರಂ ಮಹಿಳಾ ಸಮಾಜ, ಆರ್ಯ ಸಹೋದರಿಯರ ಸಂಘ, ಸೇವಾ ಸದನ, ಅಕ್ಕಮಹಾದೇವಿ ಸಮಾಜ ಮುಂತಾದವು ಸ್ಥಾಪನೆಯಾದವು. ಇವು ಮಹಿಳೆಯರಿಗೆ ಶಿಕ್ಷಣ, ಕುಶಲಕಲೆ ತರಬೇತಿ, ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸುವುದರಮ್ ಊಲಕ ಅವರಲ್ಲಿ ಜಾಗೃತಿ ಮೂಡಿಸಿದವು. ಉದಾಹರಣೆಗೆ 20ನೇ ಮೇ 1915ರಂದು ಶಾರದಾ ಸ್ತ್ರೀ ಸಮಾಜದಲ್ಲಿ ಸೌಭಾಗ್ಯವತಿ ಸರಸ್ವತಿ ದೇವಿಯವರಿಂದ "ನಿಜ" ಎಂಬ ವಿಷಯವಾಗಿ ಉಪನ್ಯಾಸ ಏರ್ಪಡಿಸಲಾಗಿತ್ತು. ಥಿಯೋಸಾಫಿಕಲ್ ಸೊಸೈಟಿ ಮಂದಿರದಲ್ಲಿ ನಂಜನಗೂಡಿನ ತಿರುಮಲಾಂಬಾ ರವರು "ಸೇವೆ, ಕಾಯಕ" ವಿಷಯವಾಗಿ ಉಪನ್ಯಾಸ ನೀಡಿದರು. ಪಾರ್ವತಮ್ಮ ಪುಟ್ಟಣ್ಣ ಚೆಟ್ಟಿ ಲಕ್ನೋದಲ್ಲಿ ಜರುಗಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಬೆಂಗಳೂರಿಗೆ ಮರಳಿದ ಮೇಲೆ, ಥಿಯೋಸಾಫಿಕಲ್ ಮಂದಿರದಲ್ಲಿ ಲಕ್ನೊ ಪಟ್ಟಣದ ಅನುಭವ ಹಾಗೂ ಸಭೆಯ ತೀರ್ಮಾನಗಳನ್ನು ಕುರಿತು ತಮ್ಮ ಅನುಭವ ತಿಳಿಸಿದರು. ಮಲ್ಲೇಶ್ವರಂ ಮಹಿಳಾ ಸೇವಾ ಸಮಾಜದವರು "ಗಾಂಧಿ ನಿಧಿ" ಸಂಗ್ರಹಿಸಿ 1936ರಲ್ಲಿ ಗಾಂಧೀಜಿಯನ್ನು ಆಹ್ವಾನಿಸಿ ತಮ್ಮ ಆಭರಣಗಳನ್ನೆಲ್ಲಾ ಹರಿಜನೋದ್ಧಾರ ನಿಧಿಗೆ ನೀಡಿದರು. ಗಾಂಧೀಜಿ ಅವರ ಸೇವಾಕಾರ್ಯಗಳನ್ನು ಪ್ರಶಂಸಿದರು. ಹೀಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಅಪ್ರತ್ಯಕ್ಷವಾಗಿ ತೊಡಗಿಸಿಕೊಂಡಿದ್ದರು.

ಸಾಂಸ್ಕೃತಿಕ ಸಂಘಗಳು, ಅಪ್ರತ್ಯಕ್ಷವಾಗಿ ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿ ಶ್ರಮಿಸಿವೆ. ಅಂತವುಗಳಲ್ಲಿ 1870ರಲ್ಲಿ ಸ್ಥಾಪನೆಗೊಂಡ ಲಿಟರರಿ ಯೂನಿಯನ್, 1919ರಲ್ಲಿ ಬೆಂಗಳೂರಿನ ಬಳೇಪೇಟೆಯಲ್ಲಿ ಅ.ನ.ಸುಬ್ಬರಾಯರಿಂದ ಸ್ಥಾಪನೆಯಾದ ಕಲಾಮಂದಿರ, ಬೈದರಹಳ್ಳಿ ಯೂತ್ ಕ್ಲಬ್, ವ್ಯಾಯಾಮಶಾಲೆಗಳು ಮುಂತಾದವು. ಕಲಾಮಂದಿರ, ಮೆಜೆಸ್ಟಿಕ್ ಥಿಯೇಟರ್ ಎದುರಿನ ಆನಂದ ಮಹಲ್‌ನಲ್ಲಿದ್ದು ಇದು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸ್ವಾತಂತ್ರ್ಯ ಚಳುವಳಿ ಕೇಂದ್ರವೂ ಆಗಿತ್ತು. ರುಮಾಲೆ ಚನ್ನಬಸವಯ್ಯನವರು ಇಲ್ಲಿಯ ವಿದ್ಯಾರ್ಥಿಯಾಗಿದ್ದು ನಂತರ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಬೈದರಹಳ್ಳಿ "ಯೂತ್ ಕ್ಲಬ್" ವತಿಯಿಂದ "ಭಾರತಿ ನಾಟಕ ಸಭಾ' ಸ್ಥಾಪಿಸಿ ಇವರು, ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಟಿ.ಪಿ.ಕೈಲಾಸಂ, ಗಾಂಧೀಜಿ ರಚನಾತ್ಮಕ ಕಾರ್ಯಕ್ರಮಗಳ ಸಂಬಂಧ ರಚಿಸಿದ್ದ ನಾಟಕಗಳನ್ನು ಅಭಿನಯಿಸುತ್ತಿದ್ದರು.

ವಿದ್ಯಾರ್ಥಿ ಸಂಘಟನೆಗಳು, ಇಂಟರ್ ಮೀಡಿಯೆಟ್ ಕಾಲೇಜು ಸಂಘ, ಬೆಂಗಳುರು ಸ್ಟೂಡೆಂಟ್ಸ್ ಆರ್ಗನೈಜೇಷನ್, ಮುಸ್ಲಿಂ ಸ್ಟೂಡೆಂಟ್ಸ್ ಫೆಡರೇಷನ್, 1945ರ ವಿದ್ಯಾರ್ಥಿ ಕಾಂಗ್ರೆಸ್ ಮುಂತಾದವು. 1928ರ ಗಣಪತಿ ಗಲಾಟೆ ನಂತರ ವಿದ್ಯಾರ್ಥಿಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಹೆಚ್ಚು ಸಕ್ರಿಯವಾಗಿ ಭಾಗವಹಿಸತೊಡಗಿದರು. ಇಂಟರ್ ಮೀಡಿಯಟ್ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ 1939ರಲ್ಲಿ ಶರತ್‌ಚಂದ್ರಬೋಸ್‌ರವರಿಂದ ಉಪನ್ಯಾಸ ಏರ್ಪಡಿಸಲಾಗಿತ್ತು.

ಇಂಟರ್ ಮೀಡಿಯೆಟ್ ಕಾಲೇಜು ಸಂಘದ ವತಿಯಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿ ಸಿ.ರಾಜಗೋಪಾಲಚಾರಿ ಭಾಗವಹಿಸಿ ಮಾತನಾಡಿ ವಿದ್ಯಾರ್ಥಿಗಳು ರಾಜಕೀಯ ಪ್ರವೇಶ ಮಾಡಬೇಕೆಂದರು. 1945ರಲ್ಲಿ ಸ್ಥಾಪನೆಗೊಂಡ ವಿದ್ಯಾರ್ಥಿ ಕಾಂಗ್ರೆಸ್ ವಾರ್ಷಿಕ ಸಮಾವೇಶಗಳನ್ನು ವಿಜೃಂಭಣೆಯಿಂದ ನಡೆಸುತ್ತಿತ್ತು. 4ನೇ ನವೆಂಬರ್ 1946ರಲ್ಲಿ 2ನೇ ಸಮಾವೇಶ ಜರುಗಿ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಉಪಾಧ್ಯಕ್ಷ ರವೀಂದ್ರವರ್ಮ ಅಧ್ಯಕ್ಷತೆ ವಹಿಸಿದ್ದರು. ಆವಾಬ್ದಾರಿ ಸರ್ಕಾರ ಸ್ಥಾಪನೆ ಕರ್ನಾಟಕದ ಏಕೀಕರಣ, ವಂದೇ ಮಾತರಂ ಹಾಡದ ವಿ.ವಿ.ನೀತಿ ಖಂಡಿಸಿ ನಿರ್ಣಯ ತೆಗೆದುಕೊಳ್ಳಲಾಯಿತು. ಕಮಲಾದೇವಿ ಚಟ್ಟೋಪಾಧ್ಯಾಯರವರು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಕಾರ್ಮಿಕ ಸಂಘಗಳಾದ ಮೈಸೂರು ಸ್ಟೇಟ್ ಲೇಬರ್ ಫೆಡರೇಷನ್, ಹೋಟೆಲ್ ಸರ್ವೆಂಟ್ಸ್ ಅಸೋಸಿಯೇಷನ್, ಜಟಕ ಚಾಲಕರ ಸಂಘ, ಸ್ಕ್ಯಾವೆಂಜರ್ಸ್ ಸಂಘ, ಪೀಸ್ ಗೂಡ್ಸ್‌ಮರ್ಚೆಂಟ್ಸ್ ಸಂಘ, ಹೋಟೆಲ್ ಮಾಲೀಕರ ಸಂಘ ಸಹ ಸ್ವಾತಂತ್ರ್ಯ ಚಳುವಳಿಗೆ ಪೂರಕವಾಗಿ ಶ್ರಮಿಸಿವೆ.

ಶೈಕ್ಷಣಿಕ ಸಂಸ್ಥೆಗಳಲ್ಲಿ, ದೇಶೀ ವಿದ್ಯಾಶಾಲೆ, ಹಿಂದಿ ಪ್ರಚಾರಕ ಸಂಘ, ರಿಯಾಸತ್ ಹಿಂದಿ ಪ್ರಚಾರ ಸಮಿತಿ, ಸ್ವಯಂ ಸೇವಾ ದಳದ ಶಾಖೆಗಳು, ರಾಜಕೀಯ ಸಂಘಟನೆಗಳಲ್ಲಿ, ಪ್ರಜಾಮಿತ್ರ ಮಂಡಲಿ, ಪ್ರಜಾಪಕ್ಷ, ಸಂಯುಕ್ತ ಪ್ರಜಾಪಕ್ಷ, ಮೈಸೂರು ಕಾಂಗ್ರೆಸ್, ರ್‍ಯಾಡಿಕಲ್ ಕಾಂಗ್ರೆಸ್ ಪಾರ್ಟಿ ಮುಂತಾದವು ಜನರಲ್ಲಿ ಜಾಗೃತಿ ಮೂಡಿಸಿ, ವಸಾಹತುಶಾಹಿ ದಬ್ಬಾಳಿಕೆಯನ್ನು, ಸರ್ಕಾರದ ದಮನ ಕಾರಿ ನೀತಿಯನ್ನು ಅವರಿಗೆ ತಿಳಿಸಿ ಜಾಗೃತರನ್ನಾಗಿ ಮಾಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕುವಂತೆ ಪ್ರೇರೇಪಿಸಿದವು.

**ಅಡಿಟಿಪ್ಪಣಿಗಳು**

1. ಡಾ॥ ಕಾಮತ್ 'ಸೂರ್ಯನಾಥ', 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ದ್ವಿತೀಯ ಸಂಪುಟ; ಗೀತಾಬುಕ್ ಹೌಸ್, ಮೈಸೂರು, 1977 ಪುಟ–627

2. ಎಸ್.ಟಿ.ಮೂರ್ತಿ ಮತ್ತು ಆರ್.ಗೋಪಾಲಸ್ವಾಮಿ ಅಯ್ಯರ್, ಗಾಂಧೀ ಅಧ್ಯಯನ ಮಾಲೆ, ಬೆಂ.ವಿ.ವಿ. ಪುಟ–15
3. ಕೃಷ್ಣ ಶರ್ಮ ಸಿದ್ಧವನಹಳ್ಳಿ, 'ಗಾಂಧೀ ಮತ್ತು ಕರ್ನಾಟಕ' ಗಾಂಧೀ ಸ್ಮಾರಕ ನಿಧಿ; ಬೆಂಗಳೂರು: 1969, ಪುಟ–139
4. ಎಸ್.ಬಿ.ಎ. ನಂ.37/36, 12ನೇ ಮೇ 1937 ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು.
5. ಸೋಮಶೇಖರ್ ವೇಮಗಲ್, ಬೆಂಗಳೂರಿನಲ್ಲಿ ಮಹಾತ್ಮಗಾಂಧೀ, ಭಾರತೀಯ ವಿದ್ಯಾಭವನ, 2004, ಪುಟ–90
6. ವಿಶ್ವ ಕರ್ನಾಟಕ ರಾಷ್ಟ್ರೀಯ ವಾರ ಪತ್ರಿಕೆ 25ನೇ ಮಾರ್ಚ್ 1939, ಗೋಖಲೆ ಅಧ್ಯಯನ ಕೇಂದ್ರ ಬೆಂಗಳೂರು.